# ಸಿವ್ಹಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

## ಸಿ.ಸಿ. ನಂಃ **1117/2024**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ
ಗುರುಮಿಠಕಲ್ ಪೊಲೀಸ್ ಠಾಣೆ

// ವಿರುದ್ದ //

ಆರೋಪಿತರು ಃ ಸಾಬಣ್ಣ ಮತ್ತು ಇತರರು.

## ದೋಷಾರೋಪಣೆ

ನಾನು ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 10.01.2024 ರಂದು ರಾತ್ರಿ 09.00 ಗಂಟೆ ಸುಮಾರಿಗೆ ಗುರುಮಿಠಕಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಯಲ್ಹೇರಿ ಗ್ರಾಮದಲ್ಲಿರುವ ಚಾಸಾ-1 ಮಹಾದೇವಮ್ಮ ರವರ ಮನೆ ಪಕ್ಕದಲ್ಲಿರುವ ಮನೆಯ ಮುಂದೆ ಕುಂತ್ತಿದ್ದಾಗ 1 ರಿಂದ 4 ಆರೋಪಿತರು ಕೂಡಿಕೊಂಡು ಬಂದವರೆ ಹಳೆ ವೈಮನಸ್ಸಿನಿಂದ ಹಾಗೂ ಚಾಸಾ-1 ರವರ ಮಗನಾದ ಚಾಸಾ-5 ರವರು 1ನೇ ಆರೋಪಿತನ ಮಗನಿಗೆ ಹೋಡೆದಿರುವ ವಿಷಯದಲ್ಲಿ ಚಾಸಾ- 1 ರವರೊಂದಿಗೆ ಜಗಳ ತೆಗೆದು ಲೇ ಉದ್ರಿ ಬಸವಿ, ಚಿನಾಲಿ ನಿನ್ನ ಮಗನಿಗೆ ಹೊಡೆಯಲಿಕ್ಕೆ ಬಿಟ್ಟಿದೇನು ಭೋಸಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಮತ್ತು ರಸ್ತೆಯ ಮೇಲೆ ಆಟ ಆಡುತ್ತಿದ್ದ ಚಾಸಾ-1 ಮತ್ತು 4 ರವರ ಮಗನಾದ ಚಾಸಾ-5 ರವರಿಗೆ 1ನೇ ಆರೋಪಿತನಾದ ನೀವು ಈ ರಂಡಿ ಮಗ ನನ್ನ ಮಗನಿಗೆ ಹೊಡೆದಿದ್ದಾನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 1ನೇ ಆರೋಪಿತನು ಚಾಸಾ-5 ರವರಿಗೆ ಕೈಯಿಂದ ಆತನ ಹೊಟ್ಟೆ, ಎದೆಯ ಮೇಲೆ ಗುದ್ದಿ ಗುಪ್ತಗಾಯ ಪಡಿಸಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಚಾಸಾ-1 ರವರು ತನ್ನ ಮಗನಿಗೆ ಹೊಡೆ-ಬಡೆ ಮಾಡುತ್ತಿರುವುದನ್ನು ನೋಡಿ ಬಿಡಿಸಲಿಕ್ಕೆ ಹೋದಾಗ 1ನೇ ಆರೋಪಿತನು ಚಾಸಾ-1 ರವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಎದೆಯ ಮೇಲೆ ಕೈ ಹಾಕಿ ಕುಪ್ಪಸ ಹಿಡಿದು ಜಗ್ಗಾಡಿ ಕೈಯಿಂದ ಎದೆಗೆ ಗುದ್ದಿ ಗಪ್ತ ಗಾಯ ಪಡಿಸಿರುತ್ತೀರಿ ಹಾಗೂ 3 ನೇ ಆರೋಪಿತನಾದ ನೀವು ಒಂದು ಎಕರೆ ಹೊಲ ಹೋಗಲಿ ಬಿಡೋದಿಲ್ಲ ಅಂತಾ ತೊಡೆ ಹೊಡೆಕೊಂಡು ಚಾಸಾ-1 ರವರ ತಲೆಯ ಕೂದಲು ಹಿಡಿದು ಜಗ್ಗಾಡಿ ಕೈಯಿಂದ ಹೆಡಕಿಗೆ ಗುದ್ದಿ ಗುಪ್ತಗಾಯ ಪಡಿಸಿರುತ್ತೀರಿ ಮತ್ತು 1 ರಿಂದ 3 ನೇ ಆರೋಪಿತರು ಚಾಸಾ-1 ರವರಿಗೆ ಹೊಡೆಬಡೆ ಮಾಡುತ್ತಿರುವುದನ್ನು ನೋಡಿ 4 ನೇ ಆರೋಪಿತರಾದ ನೀವು ಕೇ ಕೇ ಹಾಕಿ ತೊಡೆಹೊಡಕೊಂಡಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.354 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 2 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಅಲ್ಲೆ ಬಿದ್ದ ಒಂದು ಹಿಡಿ ಗಾತ್ರದ ಕಲ್ಲಿನಿಂದ ಬೆನ್ನಿಗೆ ಹೊಡೆದು ಗುಪ್ತಗಾಯ ಪಡಿಸಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಚಾಸಾ-1, 4 ಮತ್ತು 5 ರವರಿಗೆ ಸೂಳಿ ಮಕ್ಕಳೆ ಇವತ್ತು ಉಳಿದಿರಿ, ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ಬಿಡೊದಿಲ್ಲ, ಕಡಿತಿವಿ ಅಂತಾ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕಃ 08.10.2024

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.